## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 246 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 06-03-2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ; ನೂತನವಾಗಿ ಎಂ.ಎಸ್.ಐ.ಎಲ್. ಮಳಿಗೆಗಳನ್ನು ಪ್ರಾರಂಭಿಸಲು ಇರುವ ನಿಯಮಗಳಾವುವು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಪ್ರಸ್ತುತ 1071 ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಇರುವ ನಿಯಮಗಳು ಕೆಳಕಂಡಂತಿವೆ:<br><br>ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 07 ಇಎಫ್ಎಲ್ 2008, ದಿನಾಂಕ:03.07.2009ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 15 ಇಎಫ್ಎಲ್ 2015, ದಿನಾಂಕ:23-09-2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕೂ ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ.<br><br>ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ |

<table>
<tr><td></td><td></td><td>(ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ)ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ರಲ್ಲಿ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಹಾಗೂ ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ಸನ್ನದನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಆ)</td><td>ದಾವಣಗೆರೆ ಜಿಲ್ಲೆಯಲ್ಲಿರುವ ಎಂ.ಎಸ್.ಐ.ಎಲ್ ಮಳಿಗೆಗಳೆಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)</td><td>ದಾವಣಗೆರೆ ಜಿಲ್ಲೆಯಲ್ಲಿ 39 ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳಿಂದ ಸರ್ಕಾರಕ್ಕೆ ಬಂದ ಆದಾಯದ ವಿವರ ಕೆಳಕಂಡಂತಿರುತ್ತದೆ.<br>(ರೂ.ಕೋಟಿಗಳಲ್ಲಿ)
<table>
<tr><th>ವಿವರ</th><th>2022-23</th><th>2023-24</th></tr>
<tr><td>ವಹಿವಾಟು</td><td>2,660.73</td><td>3,187.09</td></tr>
<tr><td>ವೆಚ್ಚಗಳು</td><td>2,576.59</td><td>3,064.14</td></tr>
<tr><td>ನಿವ್ವಳ ಲಾಭ</td><td>84.14</td><td>122.95</td></tr>
</table></td></tr>
<tr><td>ಈ)</td><td>ಪ್ರಸ್ತುತ ರಾಜ್ಯದ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಅವರುಗಳಿಗೆ ನೀಡುತ್ತಿರುವ ವೇತನವೆಷ್ಟು? (ವಿವರವಾಗಿ ಮಾಹಿತಿ ಒದಗಿಸುವುದು)</td><td>ಪ್ರಸ್ತುತ ರಾಜ್ಯದ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆ: 2628 (ಜನವರಿ 2025ಕ್ಕೆ). ಸದರಿ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನದ ವಿವರ ಕೆಳಕಂಡಂತಿದೆ.<br>(ರೂ.ಗಳಲ್ಲಿ)
<table>
<tr><th>ಕ್ರ ಸಂ</th><th>ಪದನಾಮ (ಹೊರಗುತ್ತಿಗೆ)</th><th>ತಿಂಗಳ ಒಟ್ಟು ವೇತನ</th></tr>
<tr><td rowspan="2">1</td><td>ಇನ್-ಚಾರ್ಜ್ ಶಾಪ್ ಹೆಲ್ಪರ್</td><td>15,175/-</td></tr>
<tr><td>ಶಾಪ್ ಹೆಲ್ಪರ್</td><td>14,425/-</td></tr>
<tr><td rowspan="2">2</td><td>ಇನ್-ಚಾರ್ಜ್ ಶಾಪ್ ಹೆಲ್ಪರ್</td><td>14,623/-</td></tr>
<tr><td>ಶಾಪ್ ಹೆಲ್ಪರ್</td><td>13,873/-</td></tr>
<tr><td></td><td>ಇನ್-ಚಾರ್ಜ್ ಶಾಪ್ ಹೆಲ್ಪರ್</td><td>13,848/-</td></tr>
</table></td></tr>
</table>

| | | | | | | |
|---|---|---|---|---|---|---|
| | | | 3 | ಶಾಪ್ ಹೆಲ್ಪರ್ | 13,348/- | |
| | | | 4 | ಇನ್-ಚಾರ್ಜ್ ಶಾಪ್ ಹೆಲ್ಪರ್ | 13,347/- | |
| | | | | ಶಾಪ್ ಹೆಲ್ಪರ್ | 12,847/- | |

ಆಇ 14 ಇಎಲ್‌ಕ್ಯೂ 2025

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

| ಅನುಬಂಧ-1 | | |
|---|---|---|
| **ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಂಎಸ್‌ಐಎಲ್ ಮದ್ಯ ಮಳಿಗೆಗಳ ವಿವರ** | | |
| **ಕ್ರ.ಸಂ** | **ಜಿಲ್ಲೆಯ ಹೆಸರು** | **ಮಳಿಗೆಗಳ ಸಂಖ್ಯೆ** |
| 1 | ಬಾಗಲಕೋಟೆ | 44 |
| 2 | ಬೆಂಗಳೂರು ನಗರ | 80 |
| 3 | ಬೆಂಗಳೂರು ಗ್ರಾಮಾಂತರ | 12 |
| 4 | ಬೆಳಗಾವಿ | 96 |
| 5 | ವಿಜಯಪುರ | 44 |
| 6 | ಬಳ್ಳಾರಿ | 26 |
| 7 | ವಿಜಯನಗರ | 27 |
| 8 | ಬೀದರ್ | 32 |
| 9 | ಚಿಕ್ಕಮಗಳೂರು | 30 |
| 10 | ಚಿಕ್ಕಬಳ್ಳಾಪುರ | 29 |
| 11 | ಚಿತ್ರದುರ್ಗ | 31 |
| 12 | ಚಾಮರಾಜನಗರ | 18 |
| 13 | ದಕ್ಷಿಣ ಕನ್ನಡ | 35 |
| 14 | ದಾವಣಗೆರೆ | 39 |
| 15 | ಧಾರವಾಡ | 32 |
| 16 | ಗದಗ | 20 |
| 17 | ಕಲಬುರಗಿ | 48 |
| 18 | ಹಾಸನ | 39 |
| 19 | ಹಾವೇರಿ | 29 |
| 20 | ಕೊಡಗು | 12 |
| 21 | ಕೊಪ್ಪಳ | 22 |
| 22 | ಕೋಲಾರ | 26 |
| 23 | ಮಂಡ್ಯ | 40 |
| 24 | ಮೈಸೂರು | 45 |
| 25 | ರಾಮನಗರ | 20 |
| 26 | ರಾಯಚೂರು | 37 |
| 27 | ಶಿವಮೊಗ್ಗ | 41 |
| 28 | ತುಮಕೂರು | 58 |
| 29 | ಉಡುಪಿ | 16 |
| 30 | ಉತ್ತರ ಕನ್ನಡ | 22 |
| 31 | ಯಾದಗಿರಿ | 21 |
| | **ಒಟ್ಟು** | **1071** |

**ಆಇ 14 ಇಎಲ್‌ಕ್ಯೂ 2025**